Encroachment on burial ground at Sangayyanapalya village, Bangalore South Taluk

490. SRI B. V. RAMACHANDRA REDDY (Varthur)—Will the Minister for Rural Development and Panchayati Raj be pleased to state.-

(a) whether it is a fact that the Industrial Development Board has encroached the Burial ground at Dyavasandr Dakale Singayyana village formerly known as Shingayyanapalya of Krishnarajapura Hobli Bangalore South Taluk;

(b) if not what happened to the burial ground;

(c) the alternate arrangements the Government would make for funeral purposes, in the village?

SRI K. PRABHAKAR (Minister for Rural Development and Panchayati Raj —

(a) An extent of 31 acres 9 guntas of land had been sanctioned to the Industrial Development Board in Sangayyanapalya by the Department of Industries and Commerce *vide* order No. CD 49 AFD B 69 dated 3rd December 1969. A compound has been erected in that area by the Board and it is not an encroachment.

(b) According to the Revenue records there is no Burial ground in this village. The villagers are utilising the eastern portion of the above granted for funeral purposes.

(c) No representation has so far been received for reserving the land for funeral purposes.

ಶ್ರೀ ಬಿ ವಿ. ರಾಮಚಂದ್ರ ರೆಡ್ಡಿ .—ಸ್ವಾಮಿ, ೩೧-೧೨-೧೯೬೯ರಲ್ಲಿ ಸಂಗಯ್ಯನ ಪಾಳ್ಯದ ಜನ ಶವ ಸಂಸ್ಕಾರಕ್ಕೆ ಉಪಯೋಗಿಸುತ್ತಿದ್ದ ಸ್ಮಶಾನ ಜಮೀನು ೩೧ ಎಕರೆ ೯ ಗುಂಟೆ ಕೈಗಾರಿಕಾಭಿವೃದ್ಧಿ ಮಂಡಲಿಗೆ ಸೇರಿತ್ತೆ?

†ಶ್ರೀ ಕೆ. ಪ್ರಭಾಕರ್ .—ಸೇರಿತ್ತು.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ — ಅಲ್ಲ ಸ್ವಾಮಿ, ಹೆಟ್ಟಿದವನು ಸಾಯಲೆ ಬೇಕು, ಸಾಯುವವನನ್ನು ಬದುಕಿಸುವುದಕ್ಕೆ ತಾವು ಏನೂ ಕಂಡುಹಿಡಿದಿಲ್ಲ ಶವಸಂಸ್ಕಾರ ಮಾಡುವುದಕ್ಕೆ ಇದ್ದಂಥ ಜಮೀನನ್ನು ಕೈಗಾರಿಕೆಗೆ ಕೊಟ್ಟಿದ್ದೀರಿ. ಇವತ್ತು ಧಾರ್ಮಿಕವಾಗಿ ಶವಸಂಸ್ಕಾರ ಮಾಡುವುದಕ್ಕೆ ಬೇರೆ ಏನು ವ್ಯವಸ್ಥೆ ಮಾಡಿದ್ದೀರಿ?

ಶ್ರೀ ಕೆ. ಪ್ರಭಾಕರ್. —ಸ್ಮಶಾನ ಭೂಮಿ ಅಂತ ದಾಖಲೇ ಏನೂ ಇಲ್ಲ. ಅನೂಚಾನವಾಗಿ ಉಪಯೋಗಿಸುತ್ತಿದ್ದರು, ದಾಖಲೆ ದೃಷ್ಟಿಯಲ್ಲಿ ಇಲ್ಲ ಅಂತ ಉತ್ತರ ಕೊಟ್ಟಿದ್ದೇನೆ. ಗ್ರಾಮದವರು ಸ್ಮಶಾನಕ್ಕೆ ಜಮೀನು ಬೇಕೂಂತ ಸರ್ಕಾರದಲ್ಲಿ ವ್ಯವಹಾರ ಮಾಡಿಲ್ಲ.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ .— ಸ್ವಾಮಿ, ಸರ್ಕಾರದ ಜಮೀನಿನಲ್ಲಿ ಶವಸಂಸ್ಕಾರ ಮಾಡುತ್ತಿದ್ದರು. ಇವತ್ತು ಆ ಜಮೀನನ್ನು ಸರ್ಕಾರ ಬೇರೆಯವರಿಗೆ ಕೊಟ್ಟಿದೆ ತಮ್ಮ ಉತ್ತರದಲ್ಲಿ ಗ್ರಾಮಸ್ಥರು ಪೂರ್ವ ಭಾಗ ಜಮೀನನ್ನು ಸ್ಮಶಾನಕ್ಕೆ ಉಪಯೋಗಿಸಿಕೊಳ್ಳುತ್ತಲಿದ್ದರು ಎಂದು ತಿಳಿಸಿದ್ದೀರಿ. ಈ ಜಮೀನು ಯಾರದು? ಸ್ಮಶಾನ ಇಲ್ಲದೆ ಹೋದರೆ ಶವಸಂಸ್ಕಾರಕ್ಕೆ ಅಡ್ಡಿಯಾಗುವುದಿಲ್ಲವೆ? ಇದಕ್ಕೆ ಸಂಬಂಧಿಸಿದ ವಿವರವನ್ನು ಸರ್ಕಾರದವರು ತರಿಸಿ ನೋಡಿದ್ದಾರೆಯೆ?

ಶ್ರೀ ಕೆ. ಪ್ರಭಾಕರ್ —ಅಡ್ಡಿಯಾಗಿರುವ ಪಕ್ಷಾರ ಸರ್ಕಾರಕ್ಕೆ ತಿಳಿದಿಲ್ಲ.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ —ಸ್ವಾಮಿ, ಇವತ್ತು ಆ ಊರಿನಲ್ಲಿ ಯಾರಾದರೂ ಸತ್ತರೆ ಕಳ್ಳ ತನದಲ್ಲಿ ಬೆಂಗಳೂರು ಮಾದ್ರಾಸ್ ಲೈನ್ ಪಕ್ಕದಲ್ಲಿ ಹೂಳುತ್ತಿದ್ದಾರೆ. ಗ್ರಾಮದ ಸುತ್ತಮುತ್ತಲು ಸರ್ಕಾರಿ ಜಮೀನು ಇದ್ದರೆ ಧಾರ್ಮಿಕವಾಗಿ ಶವಸಂಸ್ಕಾರ ಮಾಡುವುದಕ್ಕೆ ಅಲ್ಲಿನ ಜನಗಳಿಗೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಕೆ. ಪ್ರಭಾಕರ್ .—ಸರ್ಕಾರದಲ್ಲಿ ವ್ಯವಹಾರ ನಡೆಯದೆ, ಸರ್ಕಾರವ ಜಮೀನು ಎಲ್ಲಿದೆ ಎಂಬು ದನ್ನು ನೋಡಿ ಮಾಡಿಕೊಡುತ್ತೇವೆ.

ಶ್ರೀ ಎ. ಲಕ್ಷ್ಮಿಸಾಗರ್ .—ಮಾನ್ಯ ಮಂತ್ರಿಗಳು ಸರ್ಕಾರದ ಲೆಕ್ಕದಲ್ಲಿ ಸ್ಮಶಾನದ ಜಮೀನು ಇಲ್ಲ ವಾಸ್ತವವಾಗಿ ಸ್ಮಶಾನದ ಜಮೀನಾಗಿ ಉಪಯೋಗಿಸುತ್ತಿದ್ದರೆಂದು ಹೇಳಿದ್ದಾರೆ. ಅದರ ಸುತ್ತಲೂ ಗೋಡೆ ಹಾಕಿದ್ದಾರೆಂದು. ಹೇಳಿದ್ದರೆ ತವಸಂಸ್ಕಾರ ಮಾಡುವುದಕ್ಕೆ ಸರ್ಕಾರದವರು ಪ್ರತ್ಯೇಕವಾಗಿ ಜಾಗವನ್ನು ನಿಗದಿ ಮಾಡಿಲ್ಲ, ಈಗ ಅಲ್ಲಿನ ಜನಗಳಿಗೆ ಬಂದಿರತಕ್ಕ ಕಷ್ಟವನ್ನು ತಪ್ಪಿಸುವುದಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇದಕ್ಕಾಗಿ ಅರ್ಜಿ ಬರಬೇಕಾಗಿಲ್ಲ. As a matter of fact this land is being used as a burial ground though there is no official record as admitted by you. It is a fact that it is being used as burial ground If that is so, why they have put up a compound? If there is no burial ground did you not think of some other alternative arangements in the area? What steps you are going to take in this regard?

ಶ್ರೀ ಕೆ. ಪ್ರಭಾಕರ್ .—ಸ್ಮಶಾನಕ್ಕೆ ಜಮೀನು ಕೊಡುತ್ತೇವೆಂದು ಒಪ್ಪಿಕೊಂಡಿದ್ದೇವೆ. ಸರ್ಕಾರದ ಜಮೀನನ್ನು ಮಂಜೂರು ಮಾಡಬೇಕಾದರೆ ಅರ್ಜಿ ಕೊಡಬೇಕಾಗುತ್ತೆ.

ಶ್ರೀ ಎ. ಲಕ್ಷ್ಮಿಸಾಗರ್ .—ಸ್ವಪ್ರೇರಣೆಯಿಂದ ಮಾಡಿ.

ಶ್ರೀ ಕೆ. ಪ್ರಭಾಕರ್ .—ಸ್ವಪ್ರೇರಣೆಯಿಂದ ಮಾಡಲಿಕ್ಕೆ ಆಗುವುದಿಲ್ಲ.

Shifting of the Primary Health Centre from Hosadurga Town to Kanchipur-Kittadalu

513. SRI K. VENKATARAMAIH (Hosadurga)—Will the Minister for Health and Family Welfare be pleased to state .—

(a) the reason for shifting the Primary Health Centre from Hosadurga Town to Kanchipura- Kittadalu.

(b) whether the Government is aware that Kittadalu Village is as the tail end of this taluk.

(c) who suggested the Government for shifting the Primary Health Centre to Kittadalu Village.

(d) whether it has come to the notice of Government that the people in other parts of the taluk are facing difficulties due to shifting of Health centre to the tail end of the Taluk.

(e) whether the Government intend to help all the people of the Taluk by establishing the centre in the middle of this Taluk.